ಆಡಿಸುತ್ತಾ ಫೊರೆನ್ಸಿಕ್‌ನವನು, "ಸರ್ ಸಾಮಾನ್ಯವಾಗಿ ಎಲ್ಲರೂ ಕೂಗುವುದು ಭಯಕ್ಕೆ ಇಲ್ಲವೇ ಹೊಡೆತ ಬಿದ್ದಾಗ ಅಲ್ಲವೇ?" ಎಂದ.

"ಎಸ್, ಅದೇ ನನ್ನ ಪಾಯಿಂಟ್. ಒಂದೋ ಭಯಪಟ್ಟಿರಬೇಕು, ಇಲ್ಲಾಂದ್ರೆ ಅಚಾನಕ್ ಆಗಿ ಹೊಡೆತ ಬಿದ್ದಿರಬೇಕು.''

"ಈ ಕೊಲೆ ಯಾರೋ ಒಳಗಿನವರೇ ಮಾಡಿರಬೇಕು ಅಂತ ನನ್ನ ಬಲವಾದ ನಂಬಿಕೆ. ಅದೂ ಇಬ್ಬರು. ಆಶ್ಚರ್ಯ ಅಂದರೆ ಕೆಳಗಿದ್ದ ವಿಶಾಲಾಕ್ಷಮ್ಮನಿಗೆ ಆ ಎರಡು ಕೂಗೂ ಕೇಳಿಸಲೇ ಇಲ್ಲ. ಕೆಳಗಡೆ ಮಲಗಿದ್ದ ಎಲ್ಲರಿಗೂ ಯಾವ ಶಬ್ದ ಕೂಗೂ ಕೇಳಿಸಲಿಲ್ಲ. ಆದರೆ ನೀನು ಕೂಗಿದ್ದು ಕೇಳಿ ಎಲ್ಲಾ ಓಡಿ ಬಂದರು ಅಲ್ಲವಾ ವಿಶಾಲಾಕ್ಷಮ್ಮಾ'' ವ್ಯಂಗ್ಯವಾಗಿಯೇ ಕೇಳಿದ. ವಿಶಾಲಕ್ಷಮ್ಮನನ್ನು ಕೇಳಿದ್ದಾದರೂ ಅದು ಎಲ್ಲರನ್ನೂ ಉದ್ದೇಶಿಸಿತ್ತು.

"ಸರ್, ಈ ಸುನೀಲ್ ಬಂದು ನಮ್ಮನ್ನು ಎಬ್ಬಿಸಿದ್ದು ಸರ್. ದೊಡ್ಡಪ್ಪ ಹೋಗ್ಬಿಟ್ರು ಅಂತಾ ಬಾಗಿಲು ಬಡಿದ. ನಾವೆಲ್ಲ ಎದ್ದು ದಡಬಡನೆ ಓಡಿ ಬಂದೆವು. ನಿಜವಾಗಿಯೂ ನಮಗೆ ಯಾವ ಕೂಗುಗಳೂ ಕೇಳಿಸಲಿಲ್ಲ ಸರ್" ಅಲ್ಲಿದ್ದ ಬಂಧುಗಳಲ್ಲೊಬ್ಬ ಸಮಜಾಯಿಷಿ ಕೊಡಲು ಬಂದ.

ಅವನ ಮಾತುಗಳಿಗೂ ತನಗೂ ಸಂಬಂಧವೇ ಇಲ್ಲ ಎಂಬಂತೆ ನಾಗರಾಜಯ್ಯ "ಫೋನ್ ಮಾಡಿ ಲೇಡಿ ಪೊಲೀಸ್ ಕರೆಸಿ. ಈ ಹೆಂಗಸರನ್ನೂ ಚೆಕ್ ಮಾಡಬೇಕು. ಯಾರಿಗಾದರೂ ಎಲ್ಲಿಯಾದರೂ ಹೊಡೆತದ ಗಾಯ ಏನಾದರೂ ಆಗಿದೆಯಾ ಅಂತ..."

ಒಂದು ಕ್ಷಣ ಅಲ್ಲಿದ್ದವರೆಲ್ಲ ದಂಗು ಬಡಿದು ನಿಂತರು. ಪೊಲೀಸರು ಕೇಸ್ ಇನ್ನೂ ಹೆಣಾ ಎತ್ತುವಷ್ಟರಲ್ಲಿಯೇ ಮುಗಿಯಿತು ಎಂದು ಒಳಒಳಗೇ ಖುಷಿಪಡತೊಡಗಿದರು...

"ಇನ್‌ಸ್ಪೆಕ್ಟರ್, ನೀವು ಆಪಾದನೆ ಹೊರೆಸುತ್ತಿದ್ದೀರಾ. ಸಾಕ್ಷ್ಯಗಳಿಲ್ಲದೆಯೇ ಹೀಗೆಲ್ಲಾ ಮಾತಾಡುವ ಹಾಗಿಲ್ಲ" ಲಾಯರ್ ಖಾರವಾಗಿ ನುಡಿದ.

ಅವರ ಮಾತುಗಳಿಂದ ವಿಚಲಿತನಾಗದ ನಾಗರಾಜಯ್ಯ, "ವಿಶಾಲಾಕ್ಷಮ್ಮ ನನ್ನ ಪ್ರಕಾರ ನಿನಗೆ ನಿಜ ಗೊತ್ತಿದೆ. ಅದನ್ನು ಹೇಳದಿದ್ದರೆ ಎಲ್ಲರ ಮೇಲೂ ಕೊಲೆ ಕೇಸ್ ಜಡಿದು ಹದಿನೈದು ವರ್ಷ ಜೈಲಿನಲ್ಲಿ ಕೊಳೆಯುವಂತೆ ಮಾಡಿಬಿಡುತ್ತೇನೆ'' ಎಂದ.

'ರೀ ಪಿ.ಸಿ ಎಲ್ಲರನ್ನೂ ಅರೆಸ್ಟ್ ಮಾಡಿ'' ಎಂದು ಸುನೀಲ್ ಕಡೆ ತಿರುಗಿ ''ನಡಿಯಯ್ಯ ನಿನ್ನ ಮೇಲೇ ಅನುಮಾನ ನನಗೆ. ನೀನೊಬ್ಬನೇ ಇಲ್ಲಿ ಯಾರಿಗೂ ಗೊತ್ತಿಲ್ಲದವನು. ಇವನನ್ನು ಮೊದಲು ಒದ್ದು ಒಳಗಡೆ ಹಾಕ್ರೀ, ಬಾಯಿ ಬಿಡ್ತಾನೇನೋ ನೋಡೋಣಾ" ಎಂದ ನಾಗರಾಜಯ್ಯನ ಧ್ವನಿ ಇನ್ನಷ್ಟು ಗಡುಸಾಯಿತು.

ಅವನ ತೋಳಿಗೆ ಕೈ ಹಾಕಿ ಒಬ್ಬ ಪಿ.ಸಿ ಇನ್ನೇನು ಎಳೆಯಬೇಕು ಎನ್ನುವಷ್ಟರಲ್ಲಿ ವಿಶಾಲಾಕ್ಷಮ್ಮ ಕೂಗಿದಳು– "ಸಾರ್ ನಿಜ ಹೇಳ್ತೀನಿ ನನ್ನ ಮಗನನ್ನು ಏನೂ ಮಾಡಬೇಡಿ..."

ಒಂದುಕ್ಷಣ ಅಲ್ಲಿದ್ದ ಪೊಲೀಸರು ಅವಾಕ್ಕಾದರು.

"ಸಾರ್ ಅವನನ್ನು ಬಿಡಿ. ಆಸ್ತಿ ಆಸೆಗೆ ನಾನೇ ಮಣ್ಣು ತಿನ್ನೋ ಕೆಲಸ ಮಾಡಿದೆ. ಇವನಿಗೆ ಏನೂ ಗೊತ್ತಿಲ್ಲ. ನಾನೇ ಸಾಹೇಬರ ದೂರದ ಸಂಬಂಧಿಯೆಂದು ಕರೆದಿದ್ದೆ. ಹೇಗೂ ಕೊಲೆ ಆಪಾದನೆ ನನ್ನ ಮೇಲೆಯೇ ಬರೋದು. ಹಾಗಾಗಿ ಆಸ್ತಿ ಇವನಿಗೇ ಸಿಗಲಿ ಅಂತ ಹೀಗೆ ಮಾಡಿದೆ ಸಾರ್. ದಯವಿಟ್ಟು ಅವನನ್ನು ಏನೂ ಮಾಡಬೇಡಿ ಸಾರ್... ನಿಮ್ಮ ದಮ್ಮಯ್ಯ..." ಎಂದಳು.

ಅವಳ ಮಾತುಗಳಿಗೆ ಅಚ್ಚರಿ ಪಡದ ನಾಗರಾಜಯ್ಯ "ಇವಳು ಸುಳ್ಳು ಹೇಳುತ್ತಿದ್ದಾಳೆ. ಇವನನ್ನು ಅರೆಸ್ಟ್ ಮಾಡಿ ಒಳಗಡೆ ಹಾಕಿ ನಾಲ್ಕು ತದುಕಿದರೆ ಸತ್ಯ ಹೊರಬರುತ್ತದೆ..." ಎಂದು